# TRANSLATION PAPER

**Time: 10 a.m. to 1 p.m.** **Max. Marks: 100**
**Date: 13.04.2013**

## PART-I

I. Translate the following deposition into Kannada language: 15

The contents of Ex.P.1 are correct. I have not paid the third installment. Witness volunteers that she tendered the amount as per agreement but the deft declined to accept the amount and he told me that he will accept the amount after clearance of LIC dues. It is false to suggest that I have never offered to pay the third installment and that the defendant never refused to accept nor promised to receive the amount after discharge of LIC loan. Defendant had agreed to sell the property as he was in difficulty. I do not know the nature of his difficulty. It is true that defendant had furnished us the original documents, as on 20/11/1993. It is false to suggest that I have acknowledged the receipt of the original title deeds on 20/11/1993. An acknowledgement dated 20/11/1993 was confronted to the witness with the signature. The confronted document is marked as Ex.D.1 and the signature is at Ex.D.1(a). The signature at Ex.D.1(a) is my husband's signature. I do not know whether my husband has acknowledged as per Ex.D.1. I was not present at that time. It is false to suggest that it was agreed between us that possession of the ground floor was to be delivered only after registration of the sale deed. I have not made any correspondence with defendant calling upon him to execute the sale deed on or before 25/11/1993 with an offer to pay the balance amount. Witness volunteers that all communications were oral. I have no document, to show that I had kept the balance amount ready by 25/11/1993. I had not purchased the stamp paper but I had paid the amount to Srinivas Anand to purchase the stamp. It is false to suggest that I have not paid amount to Srinivas Ananda to purchase stamp paper.

II. Translate the following document into Kannada language: 15

This Indenture of lease entered into on 1st day of January,2013 at Bangalore, between:

Rajagopal Rao
Son of Keshava Rao,
Aged about 45 years,
Resident at No.1,
II Block, Jayanagar,
Bangalore-11

Hereinafter referred to as Lessor, AND

Krishna Rao
S/o Thirumala Rao,
Aged about 40 years,
No.48, Banashankari V Stage,
Bangalore.

Hereinafter referred to as Lessee

(Both the terms lessor and lessee includes their legal representatives, legal heirs, successors in interest, administrators, etc.)

WITNESSETH:

Whereas Lessor is the owner of Premises No.1, II Block, Jayanagar, Bangalore-11 and that the lessee has approached the lessor to lease out first floor of premises No.1, II Block, Jayanagar, Bangalore and the lessor has also agreed to do so.

Therefore, this Indenture of Lease witnesseth as hereunder:

1) Lease shall commence from 1st of January,2013 and the same shall be in force for a period of 11 months from today;
2) Lessee shall pay monthly rent of Rs.5000/- on or before 5th of each month;
3) Lessee shall pay water and electricity charges separately;
4) Lessee shall not sub-lease or under-let or put any third party into the premises;
5) Lessee shall use the premises purely for his residential purpose and for his family members;
6) If the lessee fails to pay monthly rent continuously for a period of two months, the lesser would be at liberty to forfeit the lease and take possession of the property in accordance with law;
7) Lessee shall not cause any damage to the property and shall maintain it in a decent manner; and
8) After the expiry of the lease period, both the parties will be at liberty to renew the lease on the terms and conditions to be mutually agreed upon.

SCHEDULE: Part and parcel of I Floor of Premises No.1, II Block, Jayanagar, Bangalore-11 consisting of a Hall, Dining Hall, two bed rooms with attached bathrooms, kitchen, with all electrical fittings.

The Lessor and the Lessee have set their hands to this Indenture of lease on the day, month and year as aforesaid.

WITNESSES:

1.

2. Lessor

Bangalore,
Date:1.1.2013 Lessee

III. <u>Translate the following passage from a Judgment into Kannada language</u>: 20

Article 54 of the Limitation Act specifies two points of time from which time begins to run for the purpose of computing the period of three years limitation with regard to filing suits for specific performance of contract. One, is the date fixed for performance of the contract and two, if no such date is fixed then when the plaintiff has notice of the performance being refused. Much reliance has been placed on the decision of the Apex Court in the case of ***AHMED SAHEB ABIDULLA MULLA Vs. BIBIJAN,*** by the counsel for the appellants to contend that in the instant case, the suit filed for specific performance was beyond the prescribed period of limitation and therefore, the suit filed by the respondent herein was not maintainable by placing reliance on the second limb of Article 54 of the limitation Act. While considering time from which period begins to run under Article 54 of the Limitation Act, the Apex Court in the aforesaid decision held that 'fixed' used in the said article in essence means having final or crystallized form or not stopped to change or fluctuation and the inevitable conclusion is that the expression "date fixed for the performance" is a crystallized notion which is clear from the fact that the second part of Article 54 states "time from which period begins to run" which refers to a case where no such date is fixed. In other words, the Apex Court held that when date is fixed, it means that there is a definite date fixed for doing a particular act and when there is no date fixed then when the plaintiff has notice that performance is refused is also a definite point of time when the plaintiff notices the refusal and in that sense both the particulars refer to definite dates.

**PART-II**

IV. <u>Translate the following deposition into English language</u>: 15

ದಿನಾಂಕ *2-1-1995* ರಂದು ವಾದಿ ಒಂದು ಕರಾರು ಪತ್ರ, ಮತ್ತು ಜನರಲ್ ಫವರ್ ಆಫ್ ಅಟಾರ್ನಿ (ನಿಶಾನೆ-ಪಿ*1* ಮತ್ತು ಪಿ*2*) ಪತ್ರಗಳನ್ನು ತೆಗೆದುಕೊಂಡು ನಮ್ಮ ಮನೆಗೆ ಬಂದು ನಮ್ಮ ತಂದೆಯವರಾದ ನಂಜುಂಡಯ್ಯನವರ ಜೊತೆಯಲ್ಲಿ ಮಾತನಾಡಿ ಆ ದಿವಸ ನಮ್ಮ ತಂದೆಯವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿದ್ದುದರಿಂದ ಅವರು ಈ ಕರಾರು ಪತ್ರದಲ್ಲಿ ನಾವು ಮಾತನಾಡಿರುವ ವಿಷಯಗಳೆಲ್ಲವನ್ನು ಟೈಪ್ ಮಾಡಿಸಿಕೊಂಡು ಬಂದಿದ್ದೀರಾ ಎಂದು ಕೇಳಲು, ವಾದಿಯು ನಮ್ಮ

ಮಾತುಕತೆಯಂತೆ ಎಲ್ಲವೂ ಈ ಕರಾರು ಪತ್ರದಲ್ಲಿ ಟೈಪ್ ಮಾಡಿಸಲಾಗಿದೆ ಎಂದು ಹೇಳಿ ನಮ್ಮ ತಂದೆ ಸಹಿ ಮಾಡಿ ನಾನು ಮತ್ತು ನನ್ನ ತಮ್ಮ ಪುಟ್ಟಣ್ಣನನ್ನು ಸಹಿ ಮಾಡಲು ಹೇಳಿದರು. ನಮ್ಮ ತಂದೆಯವರ ಮಾತಿನಂತೆ ನಾವುಗಳು ಸಹಿ ಮಾಡಿ ನಮ್ಮ ತಂದೆಯವರ ಹೆಸರಿನಲ್ಲಿ ತಂದಿದ್ದ ರೂ.1,00,000-00 ಗಳ ಅಡ್ವಾನ್ಸ್ ಹಣವನ್ನು ಡಿ.ಡಿ.ಗಳ ಮೂಲಕ ಪಡೆದು ನನ್ನ ತಮ್ಮ 4ನೇ ಪ್ರತಿವಾದಿಯ ಸಹಿಗಾಗಿ ನಮ್ಮ ತಂದೆಯವರು ಈ ಕರಾರು ಪತ್ರ ಮತ್ತು ಜನರಲ್ ಫವರ್ ಆಫ್ ಅಟಾರ್ನಿಯನ್ನು ತಮ್ಮ ಬಳಿ ಇಟ್ಟುಕೊಂಡಿದ್ದು ನನ್ನ ತಮ್ಮ ಸಂಜೆ ಮನೆಗೆ ಬಂದಾಗ ಈ ಕರಾರು ಪತ್ರಕ್ಕೆ ಮತ್ತು ಜನರಲ್ ಫವರ್ ಆಫ್ ಅಟಾರ್ನಿಗೆ ಸಹಿ ಮಾಡು ಎಂದು ಕೇಳಿದಾಗ, ನನ್ನ ತಮ್ಮ ಶ್ರೀಕಂಠ ಈ ಮೇಲ್ಕಂಡ ಪತ್ರಗಳನ್ನು ಓದಿ ಅದರಲ್ಲಿ ಪೂರಾ ಹತ್ತು ಎಕರೆ ಜಮೀನು ಕೇವಲ ರೂ.1,00,000-00 ಗಳು ಎಂದು ನಮೂದಿಸಲಾಗಿದೆ ಎಂದು ನನ್ನ ತಮ್ಮ ನಮ್ಮ ತಂದೆಯವರಿಗೆ ತಿಳಿಸಲಾಗಿದ ಅವರು ವಾದಿ ನಮ್ಮನ್ನು ಮೋಸ ಮಾಡುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆಂದು ಕೋಪಗೊಂಡು ವಾದಿ ಬಂದ ನಂತರ ಮಾತನಾಡೋಣ ಎಂದರು.

V. <u>Translate the following document into English language:</u> 15

ಸನ್ ಒಂದು ಸಾವಿರದ ಒಂಭೈನೂರ ಎಂಭತ್ತ ಒಂಭತ್ತನೆಯ ಇಸವಿ ಸೆಪ್ಟಂಬರ್ ಮಾಹೇ ತಾರೀಖು ಇಪ್ಪತ್ತ ಐದರಲ್ಲೂ (25-9-1989) ಬೆಂಗಳೂರು-23, ಮಾಗಡಿ ರಸ್ತೆ, ಕೆಂಪಾಪುರ ಅಗ್ರಹಾರ, 4ನೇ ಅಡ್ಡ ರಸ್ತೆ, 1182 ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಶ್ರೀ.ಎಂ.ಆದಿಕೇಶವಲು ನಾಯ್ಡು ರವರ ಮಗ ಸುಮಾರು (36) ವರ್ಷ ವಯಸ್ಸುಳ್ಳ ಶ್ರೀ.ಎ.ಗೋಪಿ ರವರಿಗೆ, ಬೆಂಗಳೂರು-23, ಮಾಗಡಿ ರಸ್ತೆ, ಕೆಂಪಾಪುರ ಅಗ್ರಹಾರ, 4ನೇ ಅಡ್ಡ ರಸ್ತೆ, 1182 ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಲೇಟ್ ಮುನಿಸ್ವಾಮಿ ನಾಯ್ಡು ರವರ ಮಗ ಸುಮಾರು (72) ವರ್ಷ ವಯಸ್ಸುಳ್ಳ ಶ್ರೀ.ಎಂ.ಆದಿಕೇಶವಲು ನಾಯ್ಡು ಆದ ನಾನು ಬರೆಸಿಕೊಟ್ಟ ಸ್ಥಿರ ಸ್ವತ್ತಿನ ಸೆಟಲ್‌ವೆಂಟ್ ಡೀಡ್ ಯಾ ವ್ಯವಸ್ಥಾ ಪತ್ರದ ಕ್ರಮವೇನೆಂದರೆ:-

ಅದಾಗಿ ತಾರೀಖು: 2-8-1963 ರಲ್ಲಿ ಬೆಂಗಳೂರು ಸಿಟಿ ಸೌತ್ ಸಬ್ ರಿಜಿಸ್ಟ್ರಾರ್ ರವರ ಆಫೀಸಿನಲ್ಲಿ 1 ನೇ ಬುಕ್ಕು, 2441 ನೇ ನಂಬರಾಗಿ ರಿಜಿಸ್ಟರು ಆಗಿರುವ ಕ್ರಯಪತ್ರದ ಮೂಲಕ ಚೆನ್ನಿಗಪ್ಪ ರವರಿಂದ ಶಾಂತಬಾಯಮ್ಮ ರವರ ಹೆಸರಿಗೆ ಕ್ರಯವಾಗಿ ಬಂದು ನಂತರ ತಾರೀಖು: 30-1-1967 ರಲ್ಲಿ ಬೆಂಗಳೂರು ಸಿಟಿ ಶ್ರೀರಾಮಪುರಂ ಸಬ್ ರಿಜಿಸ್ಟ್ರಾರ್ ರವರ ಆಫೀಸಿನಲ್ಲಿ 1 ನೇ ಬುಕ್ಕು, 11ನೇ ವಾಲ್ಯೂಂ, 152 ರಿಂದ 155 ನೇ ಪುಟಗಳಲ್ಲಿ 2061 ನೇ ನಂಬರಾಗಿ ರಿಜಿಸ್ಟರು ಆಗಿರುವ ಕ್ರಯ ಪತ್ರದ ಮೂಲಕ ಶ್ರೀಮತಿ.ಶಾಂತಬಾಯಮ್ಮ ರವರಿಂದ ನನ್ನ ಹೆಸರಿಗೆ ಕ್ರಯವಾಗಿ ಬಂದು ಆಲಾಗಾಯ್ತುವಿನಿಂದ ನನ್ನ ಸ್ವಾಧೀನಾನುಭವದಲ್ಲಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ

ಬೆಂಗಳೂರು. ಸಿಟಿ ಕಾರ್ಪೊರೇಷನ್ 32 ನೇ ಡಿವಿಜನ್ನಿಗೆ ಸೇರಿದ, ಕೆಂಪಾಪುರ ಅಗ್ರಹಾರ, 4ನೇ ಅಡ್ಡ ರಸ್ತೆ, 1182 ನೇ ನಂಬರುಳ್ಳ ಪ್ರಾಪರ್ಟಿ ಸ್ವತ್ತನ್ನು ಅಂದರೆ 50,000-00 ಐವತ್ತು ಸಾವಿರ ರೂಪಾಯಿಗಳು ಬೆಲೆ ಬಾಳುವ ಮನೆಯ ಸ್ವತ್ತನ್ನು ಶ್ರೀ.ಎ.ಗೋಪಿ ಆದ ನೀನು ನನಗೆ ಮಗನಾಗಿರುವುದರಿಂದಲೂ ಮತ್ತು ನನ್ನ ಮಗನಾದ ಎ.ಗೋಪಿ ಈತನಿಗೆ 1974 ರಲ್ಲಿ ಕಣ್ಣುಗಳನ್ನು ಸಹ ಕಳೆದುಕೊಂಡಿರುವುದರಿಂದಲೂ ಮತ್ತು ನೀನು ನಿನ್ನ ಮುಂದಿನ ಜೀವನಕ್ಕೆ ನನ್ನನ್ನೇ ಆಶ್ರಯಿಸಿಕೊಂಡಿರುವುದರಿಂದ ಅವನ ಮುಂದಿನ ಶ್ರೇಯೋಭಿವೃದ್ಧಿಗಾಗಿ ಇದರಡಿ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ಥಿರ ಸ್ವತ್ತನ್ನು ಈ ದಿವಸವೇ ನಿನ್ನ ಹೆಸರಿಗೆ ರಿಜಿಸ್ಟರು ಮಾಡಿಸಿಕೊಟ್ಟು ಸದರಿ ಸ್ವತ್ತನ್ನು ಸಹ ಈ ದಿವಸವೇ ನಿನ್ನ ಸ್ವಾಧೀನಾನುಭವಕ್ಕೆ ಬಿಟ್ಟು ಕೊಟ್ಟಿರುತ್ತೇನೆ. ಈ ಸ್ವತ್ತು ನನಗೆ ಮೇಲ್ಕಂಡ ರೀತ್ಯಾ ನನ್ನ ಸ್ವಂತ ಸಂಪಾದನೆಯಿಂದ ಸ್ವಯಾರ್ಜಿತವಾಗಿ ಬಂದಿರುವ ಸ್ವತ್ತಾದುದ್ದರಿಂದ ಇದಕ್ಕೆ ನಾನೇ ಹಕ್ಕುದಾರನು ಹಾಗೂ ವಾರಸ್ಸುದಾರನೆಂತಲೂ ಇದರ ಮೇಲೆ ಮೈನರು ಹಕ್ಕು, ಜೀವನಾಂಶದ ಹಕ್ಕು, ವಾರಸ್ಸು ಹಕ್ಕು, ಸ್ತ್ರೀಧನದ ಹಕ್ಕು. ಇವೇ ಮೊದಲಾದ ಹಕ್ಕುದಾರಿ ತಕರಾರುಗಳಾಗಲೀ ಕೋರ್ಟುಗಳ ಜಪ್ತಿ ವಗೈರೆ ಅಟ್ಯಾಚುಮೆಂಟುಗಳ ತಕರಾರುಗಳಾಗಲೀ ಅಧಾರ ಭೋಗ್ಯ ವಗೈರೆ ಪರಾಧೀನಗಳ ತಕರಾರುಗಳಾಗಲೀ ಯಾವುದು ಇರುವುದಿಲ್ಲ ಎಂದು ನಿನಗೆ ಸಂಪೂರ್ಣ ನಂಬಿಕೆ ಹೇಳಿ ಈ ಸ್ವತ್ತನ್ನು ನಿನಗೆ ಈ ವ್ಯವಸ್ಥಾ ಪತ್ರದ ಮೂಲಕ ವ್ಯವಸ್ಥೆ ಮಾಡಿಕೊಟ್ಟಿರುತ್ತೇನೆ ಎಂದು ನನ್ನ ಖುದ್ದು ಮನೋರಾಜಿಯಿಂದ ಒಪ್ಪಿ ಬರೆಸಿಕೊಟ್ಟ ಸ್ಥಿರ ಸ್ವತ್ತಿನ ಸೆಟಲ್‌ಮೆಂಟ್ ಡೀಡ್ ಯಾ ವ್ಯವಸ್ಥಾ ಪತ್ರ ಸಹಿ.

VI. Translate the following passage from a Judgment into English language: 20

ನಮ್ಮ ಮುಂದೆ ಮಂಡಿಸಿರುವ ಅಪೀಲುದಾರನ ಒಂದೇ ಒಂದು ಅಸಮಧಾನವೇನೆಂದರೆ, ನ್ಯಾಯಾಲಯವು ಸ್ವತಃ ತಾನಾಗಿಯೇ, ಒಟ್ಟಾರೆ 7 ವಿವಾದಾಂಶಗಳನ್ನು ಪುನಃ ರೂಪಿಸಿದೆ ಮತ್ತು ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೆ, ಪಕ್ಷಕಾರರಿಗೆ ತಿಳಿಯದಂತೆ ಹೊಸದಾಗಿ ರೂಪಿಸಿದ ವಿವಾದಾಂಶಗಳಿಗೆ ತನ್ನದೇ ಆದ ರೀತಿಯಲ್ಲಿ ಉತ್ತರಿಸಿ ತೀರ್ಪನ್ನು ಮತ್ತು ಡಿಕ್ರಿಯನ್ನು ನೀಡಿದೆ ಎಂಬುದಾಗಿದೆ. ಆದ್ದರಿಂದ, ಅವನು, ನ್ಯಾಯಾಲಯವು ಅನುಸರಿಸಿದ ಕ್ರಮವು ತಪ್ಪಾಗಿದೆ ಎಂಬುದಾಗಿ ವಾದ ಮಾಡಿದನು.

ಆರ್ಡರ್ ಶೀಟ್‌ನ್ನು ಅವಲೋಕಿಸಲಾಗಿ, ಅಧೀನ ನ್ಯಾಯಾಲಯವು ಸ್ವತಃ ತಾನಾಗಿಯೇ ಹೆಚ್ಚುವರಿ ವಿವಾದಾಂಶಗಳನ್ನು ರೂಪಿಸಿದೆ ಮತ್ತು ಅವುಗಳನ್ನು ಪಕ್ಷಕಾರರ ಪರ ಮಾನ್ಯ ವಕೀಲರಿಗಾಗಲಿ ಅಥವಾ ಸಂಬಂಧಪಟ್ಟ ಪಕ್ಷಕಾರರಿಗಾಗಲೀ ತಿಳಿಸಲಿಲ್ಲವೆಂಬುದು ನಮಗೆ

ಸ್ಪಷ್ಟವಾಗುತ್ತದೆ. ಅಧೀನ ನ್ಯಾಯಾಲಯವು, ವಿವಾದಾಂಶಗಳನ್ನು ಪುನಃ ರಚಿಸಿ ಮತ್ತು ಸ್ವತಃ ತಾನಾಗಿಯೇ ಹೆಚ್ಚುವರಿ ವಿವಾದಾಂಶಗಳನ್ನು ರೂಪಿಸಿ, ಕೆಲವು ವಿವಾದಾಂಶಗಳನ್ನು ರುಜುವಾತುಪಡಿಸುವ ಹೊಣೆಯನ್ನು ಪ್ರತ್ಯಪೀಲುದಾರನ ಮೇಲೆ ಮತ್ತೆ ಕೆಲವು ವಿವಾದಾಂಶಗಳನ್ನು ರುಜುವಾತುಪಡಿಸುವ ಹೊಣೆಯನ್ನು ವಾದಿಯ ಮೇಲೆ ಹಾಕಿದೆ. ನ್ಯಾಯವಾಗಿ ಎರಡೂ ಪಕ್ಷಕಾರರಿಗೆ, ಸಾಕ್ಷ್ಯವನ್ನು ನೀಡಲು ಪಕ್ಷಕಾರರು ಇಚ್ಛಿಸಿದರೆ, ಹಾಗೆ ಅವಕಾಶವನ್ನು ಕೊಡುವುದು ಅಧೀನ ನ್ಯಾಯಾಲಯಕ್ಕೆ ಬಿಟ್ಟಿದ್ದು ಮತ್ತು ಪಕ್ಷಕಾರರು ಅದಾಗಲೇ ನೀಡಿರುವ ಸಾಕ್ಷ್ಯವು ಸಾಕು ಎಂಬ ಅಭಿಪ್ರಾಯಪಟ್ಟರೆ, ಆಗಲೂ ಸಹ ಮಾರ್ಪಡಿಸಿದ ಅಥವಾ ಪುನಃ ರೂಪಿಸಿದ ವಿವಾದಾಂಶಗಳ ಬಗ್ಗೆ ವಾದಗಳನ್ನು ಮಂಡಿಸಲು ಪಕ್ಷಕಾರರ ಪರ ಮಾನ್ಯ ವಕೀಲರನ್ನು ಕೋರುವುದು ಅಧೀನ ನ್ಯಾಯಾಲಯಕ್ಕೆ ಬಿಟ್ಟಿದ್ದು. ಅಂತಹ ಕ್ರಮವನ್ನು ಅನುಸರಿಸಲಿಲ್ಲವಾದ್ದರಿಂದ ನಾವು, ಅಧೀನ ನ್ಯಾಯಾಲಯವು ಎಸಗಿದ ಕಾನೂನುಬಾಹಿರತೆಯಿಂದ ಮಾತ್ರವೇ ತೀರ್ಪನ್ನು ಮತ್ತು ಡಿಕ್ರಿಯನ್ನು ತಳ್ಳಿಹಾಕಬೇಕಾಗಿದೆ ಎಂಬುದು ನಮ್ಮ ಅಭಿಪ್ರಾಯ. ತದನುಸಾರವಾಗಿ, ನಮ್ಮ ಪರಿಶೀಲನೆಗಾಗಿ ಉದ್ಭವಿಸಿರುವ ವಿವಾದಾಂಶಕ್ಕೆ ನಾವು ಪ್ರತ್ಯಪೀಲುದಾರನ ಪರವಾಗಿ ಮತ್ತು ವಾದಿಯ ವಿರುದ್ಧವಾಗಿ ಉತ್ತರಿಸಿದ್ದೇವೆ.

----